'ಕ್ವಾರಂಟೈನ್ ಒಂದು ಕಾಯಿಲೆಯಲ್ಲ, ಅದು ಒಂದು ಪ್ರದೇಶದ ಹೆಸರು. ಕನಿಷ್ಠ ಇಷ್ಟು, ಉದ್ದ, ಅಗಲ ಇರುವ ಸ್ಥಳ. ಕಾಯಿಲೆಯಾದ ಜನರನ್ನು ಆರೋಗ್ಯವಂತ ಜನರಿಂದ ಬೇರ್ಪಡಿಸಿ, ರೋಗ ಹರಡದಿರಲಿ ಎಂದು ಕಾನೂನುಬದ್ಧವಾಗಿ ಕರೆತಂದು ಇರಿಸುವ ಜಾಗ' ಎಂದು ಹೇಳುತ್ತಿದ್ದೆ.

ಕ್ವಾರಂಟೈನ್‌ನಲ್ಲಿ ವೈದ್ಯರ ಮತ್ತು ದಾದಿಯರ ವ್ಯವಸ್ಥೆ ಸಾಕಷ್ಟು ಇದ್ದರೂ ಸಹ ಬಂದುಹೋಗುವ ಪ್ರತಿಯೊಬ್ಬ ರೋಗಿಯ ಕಡೆಗೆ ಗಮನ ಕೊಡಲು ಸಾಧ್ಯವಾಗುತ್ತಿರಲಿಲ್ಲ. ಕ್ವಾರಂಟೈನ್ ಜಾಗಗಳಲ್ಲಿ ಅವಶ್ಯಕ ಸವಲತ್ತುಗಳ ಕೊರತೆಯಿಂದಾಗಿ ಅನೇಕ ರೋಗಿಗಳು ನಿಸ್ತೇಜರಾಗಿರುವುದನ್ನೂ ನಾನು ನೋಡಿದ್ದೆ. ತಮ್ಮ ಕಣ್ಣ ಮುಂದೆಯೇ ತಮ್ಮವರು ಪ್ರಾಣ ಬಿಡುತ್ತಿದ್ದುದನ್ನು ನೋಡಿದ ಜನ ತಾವು ಸಾಯುವ ಮೊದಲೇ ಹೆಣವಾಗಿರುತ್ತಿದ್ದರು.

ಅನೇಕ ಸಂದರ್ಭಗಳಲ್ಲಿ ಸಾಮಾನ್ಯ ಮನುಷ್ಯ ಅಲ್ಲಿಯ ಗಾಳಿಯಲ್ಲಿ ಹರಡಿದ್ದ ಸಾಂಕ್ರಾಮಿಕ ವೈರಾಣುಗಳಿಗೆ ಬಲಿಯಾಗುತ್ತಿದ್ದ. ಆ ಮನುಷ್ಯ ಎಷ್ಟೇ ಬಲಿಷ್ಠನಾಗಿದ್ದರೂ ಕ್ವಾರಂಟೈನ್ ಗಾಳಿ ಅವನನ್ನು ದುರ್ಬಲಗೊಳಿಸುತ್ತಿತ್ತು. ಕ್ವಾರಂಟೈನ್ ಬಹಳ ವಿಚಿತ್ರವಾಗಿತ್ತು; ಅದು ಪ್ರಭಾವಶಾಲಿ ವ್ಯಕ್ತಿಗಳ ಅಂತಿಮ ಸಂಸ್ಕಾರವನ್ನು ಮಾಡುತ್ತಿತ್ತು. ಆದರೆ ಇತರ ನೂರಾರು ಮೃತ ದೇಹಗಳನ್ನು ಸತ್ತ ನಾಯಿಗಳ ಶವಗಳಂತೆ ಎಳೆದೊಯ್ದು ರಾಶಿ ಮಾಡಿ, ಯಾವುದೇ ಧಾರ್ಮಿಕ ಪಂಗಡವನ್ನೂ ನೋಡದೆ, ಸಂಸ್ಕಾರವನ್ನೂ ಮಾಡದೆ ಪೆಟ್ರೋಲ್ ಚಿಮುಕಿಸಿ ಬೆಂಕಿ ಇಡುತ್ತಿತ್ತು. ಸಂಜೆ ಮುಳುಗುವ ಸೂರ್ಯನ ಬೆಳಕಿನ ಬೆಂಕಿಯಲ್ಲಿ ಜ್ವಾಲೆಗಳು ಗಗನಕ್ಕೇರಿ ಹೊಂಬಣ್ಣದ ಜೊತೆಗೂಡಿದ್ದನ್ನು ನೋಡಿದ ಇನ್ನಿತರ ರೋಗಿಗಳು ಇಡೀ ಪ್ರಪಂಚ ಹೊತ್ತಿ ಉರಿಯುತ್ತಿದೆ ಎಂದು ಭಾವಿಸುತ್ತಿದ್ದರು.

ಜನರಲ್ಲಿ ಕ್ವಾರಂಟೈನಿನ ಭಯ ಎಷ್ಟರಮಟ್ಟಿಗೆ ಮನೆಮಾಡಿತ್ತೆಂದರೆ, ಅವರಲ್ಲಿ ಪ್ಲೇಗಿನ ಲಕ್ಷಣಗಳು ಕಂಡು ಬಂದರೂ ಎಲ್ಲಿ ರೋಗಿಯನ್ನು ಬಲವಂತವಾಗಿ ಕ್ವಾರಂಟೈನ್ ಮಾಡುತ್ತಾರೋ ಎಂಬ ಭಯದಿಂದ ಕಾಯಿಲೆಯನ್ನು ಮರೆಮಾಚುತ್ತಿದ್ದರು. ರೋಗಿಯ ಮಾಹಿತಿ ತಿಳಿದ ತಕ್ಷಣ ಸಂಬಂಧಪಟ್ಟವರಿಗೆ ಸೂಚನೆ ನೀಡಬೇಕೆಂದು ವೈದ್ಯರಿಗೆ ಎಚ್ಚರಿಕೆ ನೀಡಲಾಗಿತ್ತು. ಆದ್ದರಿಂದ ಜನ ವೈದ್ಯರ ಬಳಿ ಚಿಕಿತ್ಸೆಗೂ ಹೋಗುತ್ತಿರಲಿಲ್ಲ. ಇಂಥ ಭಯಗ್ರಸ್ತ ದುರಂತಮಯ ವಾತಾವರಣದಲ್ಲಿ ಯಾವುದಾದರೊಂದು ಮನೆಯಿಂದ ಹೆಣ ಹೊರಗೆ ಬಂದಾಗ ಮಾತ್ರ ಮನೆಯಲ್ಲಿ ರೋಗಿ ಇದ್ದದ್ದು ಗೊತ್ತಾಗುತ್ತಿತ್ತು.

ಆ ದಿನಗಳಲ್ಲಿ ನಾನೂ ಸಹ ಒಬ್ಬ ಡಾಕ್ಟರಾಗಿ ಕೆಲಸ ಮಾಡುತ್ತಿದ್ದೆ. ನನ್ನ ಮನಸ್ಸಿನಲ್ಲೂ, ತಲೆಯಲ್ಲೂ ಪ್ಲೇಗ್ ಕಾಯಿಲೆಯ ಭಯ ಮನೆಮಾಡಿತ್ತು. ಸಂಜೆ ಮನೆಗೆ ಬಂದ ತಕ್ಷಣ ನಾನು ಕಾರ್ಬೋಲಿಕ್ ಸಾಬೂನಿನಿಂದ ದೀರ್ಘಕಾಲದವರೆಗೆ ಕೈಗಳನ್ನು ತೊಳೆಯುತ್ತಿದ್ದೆ; ಕೀಟಾಣುರಹಿತ ಮಿಶ್ರಣದಿಂದ ಬಾಯಿ ಮುಕ್ಕಳಿಸುತ್ತಿದ್ದೆ; ಹೊಟ್ಟೆ ಮತ್ತು ಗಂಟಲನ್ನು ಸಾಕಷ್ಟು ಸುಡುವಂಥ ಕಾಫಿಯನ್ನೋ, ಬ್ರಾಂಡಿಯನ್ನೋ ಕುಡಿಯುತ್ತಿದ್ದೆ. ಇದರಿಂದ ನನಗೆ ತೃಪ್ತಿಯಾಗಿ ಕಣ್ಣುಮಂಜಾಗುತ್ತಿದ್ದವು. ಕಾಯಿಲೆಯ ಭಯದಿಂದ ನಾನು ಅನೇಕ ಸಲ ವಾಂತಿಯ ಮಾತ್ರೆಗಳನ್ನು ನುಂಗಿ, ವಾಂತಿ ಮಾಡಿ ಆರೋಗ್ಯವನ್ನು ಸರಿಪಡಿಸಿಕೊಳ್ಳುತ್ತಿದ್ದೆ. ಬಿಸಿಬಿಸಿ ಕಾಫಿ ಅಥವಾ ಬ್ರಾಂಡಿ ಕುಡಿದ ಮೇಲೆ ಹೊಟ್ಟೆಯಲ್ಲಿ ತಳಮಳ ಶುರುವಾಗುತ್ತಿತ್ತು; ಜ್ವರ ಮೆದುಳಿಗೆ ಹೋಗಿ, ದೇಹದ ತಾಪಮಾನ ಹೆಚ್ಚಾದಂತೆ ಭಾಸವಾದಾಗ ನಾನು ಸಾವಿನ ದವಡೆಗೆ ಸಿಲುಕಿದ ವ್ಯಕ್ತಿಯಂತೆ ವಿಚಿತ್ರವಾಗಿ ವರ್ತಿಸಿ ಏನೇನೋ ಯೋಚಿಸುತ್ತಿದ್ದೆ. ಗಂಟಲು ಸ್ವಲ್ಪ ಕೆರೆದರೂ ಇವು ಪ್ಲೇಗಿನ ಲಕ್ಷಣಗಳು ಎಂದು ಕಳವಳಗೊಳ್ಳುತ್ತಿದ್ದೆ. ಅಯ್ಯೋ! ನಾನು ಸಹ ಈ ದರಿದ್ರ ಕಾಯಿಲೆಗೆ ಬಲಿಯಾಗುತ್ತೇನೆ... ಪ್ಲೇಗ್ ಆನಂತರ... ಕ್ವಾರಂಟೈನ್.

ಆ ದಿನಗಳಲ್ಲಿ, ನನ್ನ ಬೀದಿಯನ್ನು ಗುಡಿಸುತ್ತಿದ್ದ ಒಬ್ಬ ಕ್ರಿಶ್ಚಿಯನ್, ವಿಲಿಯಂ ಭಾಗು ಖಕಾರೂಬ್ ನನ್ನ ಬಳಿ ಬಂದು ಹೇಳಿದ: 'ಸ್ವಾಮಿ... ಒಂದು ಆಶ್ಚರ್ಯದ ವಿಚಾರ! ಇವತ್ತು ಒಂದು ಆಂಬುಲೆನ್ಸ್